# **I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

OS.No. 1371/13
PW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 11-02-2020.**

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರು ಶ್ರೀ . SDG ರವರಿಂದ.**

1. ಫಕಿರಾವಾಯಿಯವರು ಗಣೇಶ ದಳವಿಯ ಹೆಂಡತಿ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ಗಣೇಶನ ಮಕ್ಕಳು ಎಂದರೆ ಸರಿ. ಸದರಿ ಗಣೇಶ ದಳವಿಯವರ ನನ್ನ ತಂದೆಯ ಚಿಕ್ಕಪ್ಪನಾಗಬೇಕು.
2. 1993 ರಲ್ಲಿ ಆಗಿದೇ ಅನ್ನುವ ಖರೀದಿ ಪತ್ರಕ್ಕೆ ಪ್ರತಿವಾದಿಗಳಿಗೆ ಮತ್ತು ಅವರ ತಾಯಿಗೆ ನಗದು ರೂಪದ ಮೂಲಕ ಪ್ರತಿಫಲದ ಹಣವನ್ನು ನೀಡಿರುತ್ತೇವೆ . ಸದರಿ ಮೊತ್ತವನ್ನು ವಾದಿಯರು ಒಮ್ಮೆಯೇ ಕೊಟ್ಟಿರುತ್ತಾರೆ . ಸದರಿ ಮೊತ್ತವನ್ನು ವಾದಿಯರಿಬ್ಬರು ಸೇರಿ ಕೊಟ್ಟಿರುತ್ತಾರೆ . ಸದರಿ ಮೊತ್ತವನ್ನು ಫಕಿರಾಬಾಯಿಯರಿಗೆ ಅವರ ಮಕ್ಕಳ ಉಪಸ್ಥಿತಿಯಲ್ಲಿ ಕೊಟ್ಟಿರುತ್ತಾರೆ . ಸಾಕ್ಷಿಯು ಮುಂದುವರೆದು ಸದರಿ ಮೊತ್ತವನ್ನು ಫಕಿರಾಬಾಯಿಯ ಗಂಡನಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.
3. ವಾದಿಯರ ಮೊತ್ತವನ್ನು ನೀಡುವ ಕಾಲಕ್ಕೆ ಗಣೇಶರವರು ಹೆಸರು ದಾವಾ ಆಸ್ತಿಯ ಉತಾರನಲ್ಲಿ ನಮೂದಾಗಿತ್ತು ಎಂದರೆ ಸರಿ . ಖರೀದಿ ಪತ್ರವಾಗುವಕಾಲಕ್ಕೂ ಗಣೇಶರವರು ಹೆಸರು ಉತಾರನಲ್ಲಿ ನಮೂದಾರಿತ್ತು ಎಂದರೆ ಸರಿ .

4. ನಾನು ಫಕಿರಾಬಾಯಿಗಾಗಲಿ ಮತ್ತು ಆಕೆಯು ಗಂಡನಿಗಾಗಲಿ ಯಾವುದೆ ಮೊತ್ತವನ್ನು ನೀಡಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಗಳು ಅವರ ತಂದೆ ತಾಯಿ ಯಾವ ಕಾಲಕ್ಕೂ ಖರೀದಿ ಪತ್ರವನ್ನು ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ . ಗಣೇಶರವರಿಗೆ ಗಂಡು ಮಕ್ಕಳಿಲ್ಲದ ಕಾರಣ ಸದರಿಯವರಿಂದ ಆಸ್ತಿಯನ್ನು ಪಡೆಯುವ ದುರುದ್ದೇಶದಿಂದ ಸುಳ್ಳು ಖರೀದಿ ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.
5. ಖರೀದಿ ಪತ್ರವಾಗಿದೆ ಎಂದು ಹೇಳುವ ಕಾಲಕ್ಕೆ ಪ್ರತಿವಾದಿಯ ಮದುವೆ ಆಗಿರುತ್ತದೆ. ಖರೀದಿ ಪತ್ರವನ್ನು ಮಾಡಿಕೊಳ್ಳುವ ಕಾಲಕ್ಕೆ ಪ್ರತಿವಾದಿನಂ 1 ರಿಂದ 3 ರವರ ಗಂಡಂದಿರ ಸಹಿಯನ್ನು ಪಡೆದುಕೊಳ್ಳಲು ಅಡಚಣೆ ಇತ್ತೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಕಾಲಕ್ಕೆ ಪ್ರತಿವಾದಿ ನಂ1 ರಿಂದ 3 ನಾವು ಉಪಸ್ಥಿತರಿದ್ದೆವೆ ನಮ್ಮ ಸಹಿಯೇ ಸಾಕೆಂದು ನುಡಿದಿರುತ್ತಾರೆ ಎಂದು ನುಡಿಯುತ್ತಾರೆ.
6. ಖರೀದಿ ಪತ್ರದ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ವಾದಿಯರಿಗೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಮಯಕ್ಕೆ ನಾನು ಹಾಜರಿದ್ದೆ ಎಂದು ನುಡಿಯುತ್ತಾರೆ . ಗಣೇಶರವರ ಮರಣದ ನಂತರ ಫಕಿರಾಬಾಯಿಯವರ ಹೆಸರು ಉತಾರನಲ್ಲಿ ನಮೂದಾಗಿದೆ ಎಂದರೆ ಸರಿ .
7. ಫಕಿರಾಬಾಯಿ ಜೀವಂತ ಇದ್ದಾಗ ವಾದಿಯರು ಯಾವುದೆ ದಾವೆಯನ್ನು ಹಾಕಿರುವುದಿಲ್ಲ. ಫಕಿರಾಬಾಯಿಯ ಮರಣದ ನಂತರ 1 ರಿಂದ 3 ನೇ ಪ್ರತಿವಾದಿಯ ಹೆಸರು ಉತಾರನಲ್ಲಿ ನಮೂದಾಗಿದೆ ಎಂದರೆ ಸರಿ . ಈ

ದಾವೆಯನ್ನು ಹಾಕುವ ಪೂರ್ವದಲ್ಲಿ ವಾದಿಯರು ಯಾವುದೆ ದಾವೆಯನ್ನು ಹಾಕಿರುವುದಿಲ್ಲ. 4 ಮತ್ತು 5 ನೇ ಪ್ರತಿವಾದಿಯರಿಗೆ ಕಾನೂನಿನ ಪ್ರಕಾರ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿಯು ನಮಗೆ ಮಾರಾಟ ಮಾಡಿದ ಮೇಲೆ ಬೇರೆಯಾರಿಗೆ ಮಾರಾಟ ಮಾಡಲು ಹಕ್ಕಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆ ರೀತಿ ಮಾರಾಟ ಮಾಡಿರಬಹುದು ಆದರೆ ಕಬ್ಜೆ ನಮ್ಮ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ 1 ರಿಂದ 3 ನೇ ಯವರೆ ಮಾಲಿಕತ್ವದ ಹಕ್ಕು ಮತ್ತು ಕಬ್ಜೆ ಇದ್ದುದ್ದರಿಂದ 4 ಮತ್ತು 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿ ಕಬ್ಜೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

8. ವಾದಿಯರು ಯಾವ ಕಾಲಕ್ಕೂ ದಾವಾ ಆಸ್ತಿಯ ಕಬ್ಜೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ವಾದಿಯರ ದಾವಾ ಆಸ್ತಿಯ ಕಬ್ಜೆಯಲ್ಲಿದ್ದಾರೆ ಎಂದು ತೊರಿಸಲು ಯಾವುದೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ .

9. ನಿಪಿ12 ರಿಂದ 12 ಸಿ ದಾವಾ ಆಸ್ತಿಗೆ ಸಂಬಂಧಿಸಿದ್ದು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ . ಸದರಿ ಪೋಟೊಗಳಿಗೂ ಹಾಗೂ ದಾವಾ ಆಸ್ತಿಗೂ ಯಾವುದೆ ಸಂಬಂಧಿವಿಲ್ಲ ಎಂದರೆ ಸರಿಯಲ್ಲ . ಬೇರೆ ಹೋಲದ ಪೊಟೊಗಳನ್ನು ಪಡೆದುಕೊಂಡು ಕಬ್ಜೆಯನ್ನು ತೊರಿಸಲು ಅದೇ ಹೋಲದ್ದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 8 ಮತ್ತು 9 ದಾಖಲೆಯಲ್ಲಿ ತೊರಿಸಿರುವಂತೆ ಆಲುಗಡ್ಡೆ ಮತ್ತು ಗೆಣಸು ದಾವಾ ಆಸ್ತಿಯಲ್ಲಿ ಬೆಳದಿದ್ದು ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ .

10. ವಾದಿಯರಿಗೆ ಸಂಬಂಧಿಸಿದಂತೆ 3 ಎಕರೆ ಜಮೀನು ಇರುತ್ತದೆ. ಸದರಿ ನಿಪಿ 8 ಮತ್ತು 9 ದಾಖಲೆಗಳು ದಾವಾ ಆಸ್ತಿಗೆ ಯಾವುದೆ ಸಂಬಂಧಿವಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾ . ಹಾಗೂ
ಜೆ ಎಮ್ ಎಫ್ ಸಿ, ಬೆಳಗಾವಿ